ಪಿಡಬ್ಲೂ.1: ಎಸ್. ರಾಜಣ್ಣ.,

**ದಿನಾಂಕಃ 23.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**6**. ನಿ.ಪಿ.3 ರಲ್ಲಿ ಯಾವ ಸಮಯಕ್ಕೆ ಚೆಕ್ಕು dishonour ಆಗಿರುತ್ತದೆ ಎಂದು ನಮೂದಿಸಿದ್ದಾರೆಯೇ ಎಂದರೆ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ಮತ್ತು 2 ರಲ್ಲಿನ ಬರವಣಿಗೆಯ ಶಾಯಿಯಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ರಲ್ಲಿ ಶಾಯಿಯಲ್ಲಿ ವ್ಯತ್ಯಾಸವಿರುವ ಬಗ್ಗೆ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲು ತೊಂದರೆ ಇಲ್ಲ ಎಂದರೆ ಸರಿ. ನಿ.ಪಿ.1 ಮತ್ತು 2 ರ ಸಹಿಗಳಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ರಲ್ಲಿ ಸಹಿಗಳಲ್ಲಿ ವ್ಯತ್ಯಾಸವಿರುವ ಬಗ್ಗೆ ತಜ್ಞರ ಅಭಿಪ್ರಾಯಕ್ಕಾಗಿ ಕಳುಹಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು ಚೆಕ್ಕುಗಳನ್ನು ಬ್ಯಾಂಕ್ ಆಫ್ ಬರೋಡಾದ ಬ್ಯಾಂಕಿನ ಮುಖಾಂತರ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿ.ಪಿ.3 ಬ್ಯಾಂಕಿನ ಹಿಂಬರಹ ಕೈಬರಹದಲ್ಲಿ ಅದಕ್ಕೆ ಬ್ಯಾಂಕಿನ ಸೀಲು ಮತ್ತು ಸಹಿಯ ಅಗತ್ಯವಿರುವುದಿಲ್ಲ ಎಂದು ಬ್ಯಾಂಕ್ ಆಫ್ ಬರೋಡಾದ ಯಾವುದಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ.

**7.** ದಿ.25.07.2011 ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕು ಒಂದು ಅಧಿಸೂಚನೆಯನ್ನು ಹೊರಡಿಸಿತ್ತು ಎಂದರೆ ಅದರ ಬಗ್ಗೆ ನನಗೆ ತಿಳಿದರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ, ಇಂಗ್ಲೀಷ್ ಬರುವುದಿಲ್ಲ. ದಿ.01.01.2021 ರಲ್ಲಿ ಆಂದ್ರ ಬ್ಯಾಂಕ್ ಮರ್ಜ್ ಆಗಿರುತ್ತದೆ ಎಂದರೆ ಸಾಕ್ಷಿಯು ದಿನಾಂಕ ತಿಳಿದಿರುವುದಿಲ್ಲ, ಆದರೆ ಮರ್ಜ್ ಆದ ವಿಷಯ ತಿಳಿದಿರುತ್ತದೆ. ಬ್ಯಾಂಕ್ ವಿಲೀನಗೊಂಡ ನಂತರ ಹಳೆಯ ಚೆಕ್ಕುಗಳು ಊರ್ಜಿತವಲ್ಲದಿದ್ದರೂ ಸಹ ನಾನು ಅದನ್ನು ಬ್ಯಾಂಕಿಗೆ ಹಾಜರುಪಡಿಸಿ ಆರೋಪಿಯ ವಿರುದ್ದ ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡುವ ವೇಳೆಯಲ್ಲಿ ನನ್ನಹೆಂಡತಿ ಹಾಜರಿದ್ದು, ಅವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆಗೆ ಒಳಪಡಿಸಲು ನನಗೆ ತೂಂದರೆ ಇರುವುದಿಲ್ಲ. ನಾನು ಒಂದು ಬ್ಯಾಂಕಿನಲ್ಲಿ ಖಾತೆಯನ್ನು ಹೊಂದಿರುತ್ತೇನೆ. ನನ್ನಹೆಂಡತಿ ಯಾವುದೇ ಬ್ಯಾಂಕ್ ನಲ್ಲಿ ಖಾತೆ ಹೊಂದಿರುವುದಿಲ್ಲ. ನನ್ನ ಮಗಳು

ಬ್ಯಾಂಕಿನಲ್ಲಿ ಖಾತೆ ಹೊಂದಿರುತ್ತಾರೆ, ಆದರೆ ಯಾವ ಬ್ಯಾಂಕಿನಲ್ಲಿ ಖಾತೆದಾರಳಾಗಿರುತ್ತಾಳೆ ಎಂದು ನನಗೆ ಗೊತ್ತಿಲ್ಲ.

**8.** ನಿ.ಪಿ.3 ರ ಬ್ಯಾಂಕಿನ ಹಿಂಬರಹದಲ್ಲಿ ಸೀಲು ಮತ್ತು ಸಹಿ ಇರುವುದಿಲ್ಲ ಎಂದು ನಾನು ನೋಟೀಸಿನಲ್ಲಿ ಮತ್ತು ಪಿರ್ಯಾದಿನಲ್ಲಿ ಹಾಗೂ ಸ್ವ-ಇಚ್ಚೆ ಹೇಳಿಕೆಯಲ್ಲಿ ನಮೂದಿಸಿರುವುದಿಲ್ಲ. ಬ್ಯಾಂಕ್ ವಿಲೀನಗೊಂಡಿರುವ ಬಗ್ಗೆ ನೋಟೀಸಿನಲ್ಲಿ ಮತ್ತು ಪಿರ್ಯಾದಿನಲ್ಲಿ ಹಾಗೂ ಸ್ವ-ಇಚ್ಚೆ ಹೇಳಿಕೆಯಲ್ಲಿ ತಿಳಿಸಿರುವುದಿಲ್ಲ. ಬ್ಯಾಂಕಿನಿಂದ ಹಣ ಪಡೆದು ಆರೋಪಿಗೆ ನೀಡಿರುವ ಬಗ್ಗೆ ಬ್ಯಾಂಕ್ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗಳು ಎಸ್.ಬಿ.ಐ ಬ್ಯಾಂಕಿನಲ್ಲಿ ಖಾತೆದರರಾಗಿರುತ್ತಾರೆ ಎಂದರೆ ಇರಬಹುದು. ನನಗೂ ಮತ್ತು ಆರೋಪಿಗೂ ಯಾವುದೇ ಹಣದ ವ್ಯವಹಾರ ನಡೆಯದಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮತ್ತು ಆರೋಪಿಯ ಹೆಂಡತಿಯ ನಡುವೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಆರೋಪಿಯ ಹೆಂಡತಿ ನನ್ನ ಮಗಳ ಖಾತೆಗೆ ಹಣ ವರ್ಗಾಯಿಸಿದ ನಂತರವೂ ಸಹ ನಾವು ಅವರಿಗೆ ಚೆಕ್ಕನ್ನು ಹಿಂದಿರುಗಿಸದೆ ಕ್ವಾರ್ಟಸ್ ಖಾಲಿ ಮಾಡಿದ ನಂತರ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.